
ಪದ್ಯವು ಕಾವ್ಯಮೀಮಾಂಸೆಯನ್ನು ಮಾತ್ರ, ಕಾವ್ಯದ ಅಪೂರ್ವ ಶಕ್ತಿಯನ್ನು ಮಾತ್ರ ಹೇಳುತ್ತಿಲ್ಲ. ಇದ್ದ, ಇಲ್ಲದ ಸಂಗತಿಗಳನ್ನು ಮನದಟ್ಟಾಗುವಂತೆ ಹೇಳುವುದು ಅಪ್ಪಟ ಕಾವ್ಯದ ಶಕ್ತಿ ನಿಜ. ಇದನ್ನೊಂದು ಸಾಮಾಜಿಕ ವ್ಯಾಖ್ಯಾನವಾಗಿ ನೋಡುವಾಗ, ಇಲ್ಲದ್ದನ್ನು ಹೇಳುವ, ಅದನ್ನೊಂದು ಮೌಲ್ಯವಾಗಿ, ಬದುಕಿನ ಕ್ರಮವಾಗಿಸಿರುವ ವ್ಯವಸ್ಥೆಯನ್ನು ಕುರಿತ ವ್ಯಂಗ್ಯವಾಗಿಯೂ ಇದನ್ನು ಇದರ ಧ್ವನಿಯಿಂದ ನೋಡಲು ಸಾಧ್ಯವಿದೆ. ಇದು 'ಅತಿ ಓದು' ಎಂದೂ ಅನ್ನಿಸಬಹುದು. ಆದರೆ, ಯಾಕೋ ಇತ್ತೀಚಿನ ಬೆಳವಣಿಗೆಗಳನ್ನು ನೋಡಿ ಆತಂಕಿತವಾಗಿರುವ ಮನಸ್ಸು ಇಂಥ ಅತಿ ಓದುಗಳನ್ನು ಮಾಡುವಂತೆ, ಓದಿದ್ದರಲ್ಲೆಲ್ಲ ಇಂಥ ಧ್ವನಿಗಳನ್ನು ಹುಡುಕುವಂತೆ ಮಾಡುತ್ತದೋ ಏನೋ...

ಮತ್ತೆ ಕೃತಿಗೆ ಮರಳುವುದಾದರೆ, ಅಂದು ಮತ್ತು ಇಂದುಗಳನ್ನು ಪಕ್ಕದಲ್ಲಿಡುವಾಗ ಕಾಣುವ ಸತ್ಯಗಳನ್ನು, ಆ ಸತ್ಯಗಳ ಸಮಾನ ಅಂಶಗಳನ್ನೂ, ಬದಲಾದ ಅಂಶಗಳನ್ನೂ ಗುರುತಿಸುವ ಮನಸ್ಥಿತಿಯನ್ನು ರೂಢಿಸಿಕೊಳ್ಳುವುದು ಸುಲಭವಲ್ಲ. ವಸ್ತುನಿಷ್ಠತೆ ಎನ್ನುವುದು ಪೂರ್ವಗ್ರಹವಾಗದಂತೆ ಕಾಪಾಡಿಕೊಳ್ಳಬೇಕಾದ ಎಚ್ಚರವೇ ಬರವಣಿಗೆಯ ಗುಣವನ್ನು ಮಾತ್ರವಲ್ಲ, ಅದರ ಪ್ರಸ್ತುತತೆಯನ್ನು, ಅದರ ಅಸ್ತಿತ್ವವನ್ನು ನಿರ್ಧರಿಸುತ್ತದೆ.

ಕಲ್ಲೂರು ಅವರು ಈ ದಾರಿಯನ್ನು ಪ್ರಜ್ಞಾಪೂರ್ವಕವಾಗಿ ಆರಿಸಿಕೊಂಡಿರುವ ಸೂಚನೆಗಳಿವೆ ಈ ಕೃತಿಯಲ್ಲಿ. ಪ್ರಾಸಂಗಿಕವಾಗಿ ಮಾಸ್ತಿ ಮತ್ತು ಕುವೆಂಪು ಅವರ ವಾಗ್ವಾದವನ್ನು ('ಶೂದ್ರ ತಪಸ್ವಿ' ನಾಟಕಕ್ಕೆ ಸಂಬಂಧಿಸಿದಂತೆ) ನೆನಪಿಸಿಕೊಳ್ಳುವುದು ಉಚಿತವೇ ಅನ್ನಿಸುತ್ತದೆ. ಪರಂಪರೆಯನ್ನು ಮುರಿದು ಕಟ್ಟುವುದನ್ನು ಮಾಸ್ತಿ ವಿರೋಧಿಸಿ, ಹೊಸ ಕಾಲದ ಕಥೆಯನ್ನು ಹೊಸ ಕಥೆಯ ಮೂಲಕವೇ ಹೇಳಬೇಕು ಎಂದರೆ, ಕುವೆಂಪು ಅದು ಅಲ್ಲವೇ ಅಲ್ಲ, ಪರಂಪರೆಯನ್ನು ಮುರಿದು ಕಟ್ಟುವುದು ಕವಿಯ ನಿರಂಕುಶಮತಿಯ ಹಕ್ಕು ಎನ್ನುತ್ತಾರೆ. ಈ ಆತ್ಮಶ್ರೀ ಮತ್ತು ನಿರಂಕುಶಮತಿ ಮಾತ್ರ ಭಾರತೀಯ ಸಮುದಾಯಕ್ಕೆ ಕಾಯಕಲ್ಪ ನೀಡಬಲ್ಲದು ಎನ್ನುವುದು ಅಂದಿಗೂ ಇಂದಿಗೂ ಸತ್ಯವೇ ಆಗಿದೆ.

ಇಲ್ಲಿನ ಕಥೆಗಳನ್ನು ಚರ್ಚಿಸುವ ಆರಂಭದಲ್ಲಿಯೇ ಒಂದು ಮಾತನ್ನು ಸ್ಪಷ್ಟಪಡಿಸಬೇಕು. ಈ ಸಂಕಲನದ




ನಕ್ಷತ್ರಕ್ಕಂಟಿದ ಮುಟ್ಟಿನ ನೆತ್ತರು
ಲೇ: ಗೋವಿಂದರಾಜು ಎಂ. ಕಲ್ಲೂರು
ಪು: 113; ಬೆ: ₹ 130
ಪ್ರ: ರೂಹು ಪುಸ್ತಕ, ಕಲ್ಲೂರು.
ಫೋನ್: 8970162207

ಕಥೆಗಳನ್ನು ಕಲಾತ್ಮಕ ಯಶಸ್ಸಿನ ಕಥೆಗಳು ಎಂದು ಹೇಳಲಾಗುವುದಿಲ್ಲ. ಬಹುತೇಕ ಕಥೆಗಳು ಅನಾಯಾಸವಾಗಿ ಓದಿಸಿಕೊಳ್ಳುತ್ತವೆ, ಪರಿಣಾಮಕಾರಿ ಎಂದೂ ಅನ್ನಿಸುತ್ತವೆ. ಆದರೆ ಮತ್ತೆ ಮತ್ತೆ ಓದಿದಾಗಲೂ ಬೇರೆ ಬೇರೆ ಅರ್ಥಗಳನ್ನು ಕೊಡುವ ಧ್ವನಿ ಪರಂಪರೆಯನ್ನು ಈ ಕಥೆಗಳು ಪಡೆದಿಲ್ಲ. ಆದರೆ, ಈ ಕಾಲದ ಕಥನಗಳಾಗಿ, ಸಾಹಿತ್ಯದ ಸಾಮುದಾಯಿಕ ಹೊಣೆಗಾರಿಕೆಯನ್ನು ನಿಭಾಯಿಸುವ ದೃಷ್ಟಿಯಿಂದ ಈ ಕಥೆಗಳಿಗೆ ಅಪಾರ ಮಹತ್ವವಿದೆ.

ಆಹಾರ, ಲಿಂಗ ರಾಜಕಾರಣ, ವರ್ಗ ವ್ಯವಸ್ಥೆ – ಈ ಎಲ್ಲವುಗಳ ಕ್ರೌರ್ಯವನ್ನು – ಕೆಲವನ್ನು ಅಂದಿನ ಕಥೆಗಳನ್ನು ಇಂದಿನ ಕಣ್ಣಿನಲ್ಲಿ ಮರು ನಿರೂಪಿಸಲಾಗಿದೆಯಾದರೆ, ಮತ್ತೆ ಕೆಲವು ನೇರ ಇಂದಿನ ಕಥೆಗಳೇ ಆಗಿವೆ. ಕೆಲವು ಕಥೆಗಳನ್ನು ಪ್ರಾತಿನಿಧಿಕವಾಗಿ ಚರ್ಚಿಸಬಹುದು.

ಸಂಕಲನದ ಮೊದಲಿನ ಕಥೆ, 'ಮೆಚ್ಚನಾ ಪರಮಾತ್ಮನು', ಒಂದು ಜೀವ ಸಂವಾದದ ಕತೆಯಾಗಿದೆ. ಆಹಾರವು ವಿಘಟನೆಯ ಆಕರವೇ ಆಗಿಬಿಟ್ಟಿರುವ